ಅಂಗಡಿ ಬಾಗಿಲು ತೆರೆದದ್ದು ಕಂಡು ಅರ್ಧ ಗಾಬರಿ, ಇನ್ನರ್ಧ ಗೊಂದಲದಲ್ಲಿ ಓಡುತ್ತಲೇ ಬಂದಿದ್ದ. ನೋಡಿದರೆ ತಾನಂದುಕೊಂಡದ್ದು ಏನೂ ಸಂಭವಿಸಿರದೇ, ಮುಖ ಕೆಳಗೆ ಹಾಕಿ ರಟ್ಟನ್ನು ಕತ್ತರಿಸುತ್ತಿದ್ದ ಮನೋಹರನನ್ನು ಕಂಡು ಸಮಾಧಾನಪಟ್ಟ.

ದಿನವೂ ಗಡಿಬಿಡಿಯಲ್ಲೇ ಬರುವ ಮನೋಹರ ಅಂಗಡಿಯ ಶಟರ್ ಎತ್ತುತ್ತಿದ್ದಂತೇ ಬಾಬಣ್ಣನ ಅಂಗಡಿಯಲ್ಲೋ, ಪ್ರಭುರಾಯರ ಹೋಟೆಲ್ ಎದುರಲ್ಲೋ ಕಾದು ನಿಂತಿರುತ್ತಿದ್ದ ಸಹಾಯಕ ಗೋಪಿ ಅಂಗಡಿಯೊಳಗೆ ಹರಡಿಕೊಂಡಿರುತ್ತಿದ್ದ ಸಾಮಗ್ರಿಗಳನ್ನ ಚೂರು ಬದಿಗೆ ಸರಿಸಿ, ಕಸ ಗುಡಿಸಿ, ಮತ್ತೆ ಸ್ವಸ್ಥಾನದಲ್ಲಿಟ್ಟು ಸ್ವಚ್ಛಗೊಳಿಸುವ ಶಾಸ್ತ್ರ ಮಾಡುತ್ತಿದ್ದ. ಅದಾದ ನಂತರ ಗೋಡೆಗೆ ತೂಗುಹಾಕಿದ್ದ ಮಧ್ಯದಲ್ಲಿ ಗಣಪತಿ, ಆಚೀಚೆ ಲಕ್ಷ್ಮಿ, ಸರಸ್ವತಿಯರಿದ್ದ ಫೋಟೊಕ್ಕೆ ಊದುಬತ್ತಿ ಹಚ್ಚಿ, ಬೆಳಗಿ ಅಲ್ಲೇ ಸಿಗಿಸಿದ ನಂತರ ಮನೋಹರ ತನ್ನ ಎಂದಿನ ಜಾಗದಲ್ಲಿ ಕೂರುತ್ತಿದ್ದ. ನೆಲದ ಮೇಲೆ ದಪ್ಪನೆಯ ಚಾದರ ಹಾಸಿ, ಗೋಡೆಗೊರಗಿ ಕೂತನೆಂದರೆ ಮನೋಹರ ಹಿಂದಿನ ರಾತ್ರಿ ಎಣಿಸಿಕೊಂಡಿದ್ದ ಒಂದೊಂದೇ ಕೆಲಸಗಳನ್ನು ಮುಗಿಸುತ್ತ ಹೋಗುತ್ತಿದ್ದ. ಸುಮಾರು ಹನ್ನೊಂದುವರೆಯ ಹೊತ್ತಿಗೆ ಎದ್ದು ಮೈಮುರಿದು, ಬಾಬಣ್ಣನ ಅಂಗಡಿಗೆ ಹೋಗಿ ತುಸು ಕುಶಲೋಪರಿ ಮಾತನಾಡಿ ಅವನೊಟ್ಟಿಗೇ ಹೋಟೆಲಿಗೆ ಹೋಗಿ ಪ್ರಭುರಾಯರು ಏನು ಕೊಡುತ್ತಾರೋ ಆ ತಿಂಡಿ ತಿಂದು ಕಪ್ ಚಾ ಕುಡಿದು ಮತ್ತೆ ಅಂಗಡಿಗೆ ಮರಳುತ್ತಿದ್ದ. ಮಧ್ಯಾಹ್ನ ಎರಡು ಗಂಟೆಗೆ ಮನೋಹರ, ಗೋಪಿ ಇಬ್ಬರೂ ಊಟಕ್ಕೆ ಮನೆಗೆ ಹೋದವರು ಮತ್ತೆ ಮೂರು ಗಂಟೆಗೆ ಮರಳಿ ಕೆಲಸಕ್ಕೆ ತೊಡಗುತ್ತಿದ್ದರು. ಒಮ್ಮೊಮ್ಮೆ ರಾತ್ರಿ ಒಂಬತ್ತರ ತನಕವೂ ಕೆಲಸವಿರುತ್ತಿತ್ತು. ಸೀಜನ್ನಿನಲ್ಲಿ ಕಲ್ಯಾಣಮಂಟಪಗಳಲ್ಲಿ ಮದುವೆಮಂಟಪ, ಉತ್ಸವಗಳಲ್ಲಿ ವೇದಿಕೆ ತಯಾರಿಗಳಿದ್ದರೆ ಸಾಕಷ್ಟು ರಾತ್ರಿಯೇ ಆಗಿರುತ್ತಿತ್ತು. ಗೋಪಿ ಸಹಾಯಕ ಅನ್ನಿಸಿಕೊಂಡಿದ್ದರೂ ಮನೋಹರ ಆತನನ್ನ ಸ್ವಂತ ತಮ್ಮನಂತೆ ಕಾಣುತ್ತಿದ್ದ. ರಾತ್ರಿ ಮನೆಗೆ ಹೋದಾಗ ಬಿಟ್ಟರೆ ಆತ ಎಷ್ಟು ಹೊತ್ತಿಗೂ ಇವನ ಬಾಲಂಗೋಚಿಯೇ ಆಗಿರುತ್ತಿದ್ದ.

ಅಂಗಡಿಯ ಕಸ ಗುಡಿಸಿದ ಶಾಸ್ತ್ರ ಮಾಡುತ್ತಿದ್ದಂತೇ ಗೋಪಿಗೆ ಮನೋಹರನ ಮನಸ್ಸು ಎಂದಿನಂತಿಲ್ಲ ಎನ್ನುವದು ಖಾತ್ರಿಯಾಗಿತ್ತು. ಯಾವತ್ತೂ ಹೆಚ್ಚಿಗೇನು ಮಾತಾಡದಿದ್ದರೂ ಅದನ್ನು ಕೊಡು, ಇದನ್ನು ತಗೋ ಎನ್ನುವ ಮಾತಿನಲ್ಲೇ, ನೋಡುವ ನೋಟದಲ್ಲೇ ಹೃತ್ಪೂರ್ವಕತೆಯನ್ನು ಸೂಸುವ ಆತನ ವರ್ತನೆಯ ಕಾರಣ ತಿಳಿಯದೇ ತಾನೇನಾದರೂ ತಪ್ಪು ಮಾಡಿದೇನೋ? ಎನ್ನುವ ತಳಮಳ ಆಗತೊಡಗಿತು. ಹಿಂದಿನ ರಾತ್ರಿ ಬಾಗಿಲು ಮುಚ್ಚುವ ಮುನ್ನ ಮರುದಿನ ಆಗಬೇಕಾದ ಕೆಲಸಗಳ ಬಗ್ಗೆ ಇಬ್ಬರೂ ಮಾತನಾಡಿಕೊಂಡೇ ಹೊರಬೀಳುವದು. ಹಿಂದಿನ ದಿನ ಪಟ್ಟಿ ಮಾಡಿಟ್ಟುಕೊಂಡಂತೆ ಮರುದಿನವೂ ಒಂದೊಂದಾಗಿ ಪೂರೈಸುವದು ಅವರಿಬ್ಬರ ಎಂದಿನ ರೂಢಿಯಾಗಿತ್ತು. ಬಾಸಿಂಗ, ತೊಂಡಿಲುಗಳಾದರೆ ಬೆಂಡುಗಳನ್ನ ಮನೋಹರ ಕತ್ತರಿಸಿಕೊಟ್ಟಂತೆಲ್ಲ ಗೋಪಿ ಅಂಟು ಹಚ್ಚಿ ಜೋಡಿಸುತ್ತಿದ್ದ. ಇತ್ತೀಚೆಗೆ ಥರ್ಮೋಕೋಲ್ ಬಳಸತೊಡಗಿದ್ದರಿಂದ ಕೆಲಸ ಹಗುರಾಗಿತ್ತು. ಫಲಕಗಳಾದರೆ ಥರ್ಮೋಕೋಲ್ ಮೇಲೆ ಮನೋಹರ ಗುರುತು ಮಾಡಿಕೊಟ್ಟ ಅಕ್ಷರಗಳನ್ನು ಕತ್ತರಿಸಿ ಅಗಲವಾದ ಥರ್ಮೋಕೋಲ್ ಮೇಲೆ ಗೋಪಿ ಅಂಟಿಸುತ್ತಿದ್ದ. ಮತ್ತೆ ಮನೋಹರ ಆ ಅಕ್ಷರಗಳಿಗೆ ಹೆಸರುಗಳ ಮೂಲಕ ಅವರವರ ವ್ಯಕ್ತಿತ್ವ ಊಹಿಸಿಕೊಂಡು ಹೊಂದುವ ಬಣ್ಣಗಳನ್ನು ಬ್ರಷ್‌ನಿಂದ ಹಚ್ಚುತ್ತಿದ್ದ. ಫಲಕಗಳ ಅಂಚಿಗೆ ಸುಂದರವಾದ ಚಿತ್ತಾರ ಬಿಡಿಸುತ್ತಿದ್ದ. ಥರ್ಮೋಕೋಲಿನ ಬಿಳಿಯ ಮೇಲೆ ವಿಧವಿಧದ ಬೇಗಡೆಗಳನ್ನ ಅಂಟಿಸಿ ಹೊಸದೊಂದು ಸ್ವರೂಪವನ್ನೇ ಸೃಷ್ಟಿಸುವದನ್ನ ಗೋಪಿ ಬೆರಗಿನಿಂದಲೇ ನೋಡುತ್ತ, ಮನೋಹರ ಹೊರಗಡೆ ಕೆಲಸಕ್ಕೆ ಹೋದಾಗ ತಾನು ಅದನ್ನು ಸಾಧಿಸುವ ಪ್ರಯತ್ನ ಮಾಡುತ್ತಿದ್ದ. ಫ್ಲೆಕ್ಸ್‌ನ ಕೆಲಸಗಳಿದ್ದರೆ ಮನೋಹರ ತಾನೇ